**ಓಂ ಶಾಂತಿ, ಬಾಪ್ ದಾದಾ. ಅವ್ಯಕ್ತಮುರಳಿ(04-03-1969)**

(ओम शान्ति, बापदादा. अव्यक्त मुरली 04-03-1969)

***ಹೋಳಿಯ ಶುಭ ಸಮಯದಲ್ಲಿ*** (होली के शुभ अवसर)

ಇಂದು ತಮ್ಮ ವಿಶೇಷ ಹೋಳಿ ಹಬ್ಬವೇ? ಹೋಳಿಯನ್ನು ಹೇಗೆ ಆಚರಿಸಲಾಗುತ್ತದೆ? ಹೋಳಿಯನ್ನು ಆಚರಿಸಲು ಬರುತ್ತದೆಯೇ? ಸಂಗಮಯುಗದ ಹೋಳಿ ಯಾವುದು? ವರ್ತಮಾನ ಸಮಯ ಯಾವ ತರಹದ ಹೋಳಿ ಆಚರಣೆಯ ಅವಶ್ಯಕತೆಯಿದೆ. ಹೋಳಿಯಲ್ಲಿ ಮಾಡಬೇಕಾದಂತಹ ಅನೇಕ ಮಾತುಗಳಿವೆ. ಬಣ್ಣ ಹಚ್ಚಲಾಗುತ್ತದೆ, ಸುಡಲಾಗುತ್ತದೆ ಮತ್ತು ಜೊತೆಗೆ ಶೃಂಗರಿಸಲಾಗುತ್ತದೆ, ಮತ್ತೆ ಕೆಲವನ್ನು ಅಳಿಸಿ ಹಾಕಬೇಕಾಗುತ್ತದೆ. ಏನೆಲ್ಲವನ್ನು ಹೋಳಿಯಲ್ಲಿ ಮಾಡಬೇಕೋ ಅವೆಲ್ಲವೂ ಈ ಸಮಯದಲ್ಲಿ ನಡೆಯುತ್ತವೆ. ಏನನ್ನು ಸುಡಬೇಕು, ಏನನ್ನು ಅಳಿಸಿ ಹಾಕಬೇಕು, ಯಾವ ಬಣ್ಣ ಹಚ್ಚಬೇಕು ಮತ್ತು ಏನನ್ನು ಶೃಂಗರಿಸಬೇಕು? ಇವೆಲ್ಲವನ್ನೂ ಮಾಡುವುದೇ ಆಚರಣೆಯಾಗಿದೆ. ಒಂದು ವೇಳೆ ಈ ನಾಲ್ಕರಲ್ಲಿ ಏನಾದರೂ ಕೊರತೆ ಇದ್ದರೆ ಆಚರಣೆ ಎನ್ನಲಾಗುವುದಿಲ್ಲ.

ಹೋಳಿಯ ದಿನಗಳಲ್ಲಿ ಬಹಳ ಸುಂದರವಾಗಿ ಅಲಂಕರಿಸಿಕೊಳ್ಳುತ್ತಾರೆ, ಅದು ಹೇಗೆ? ದೇವತೆಗಳ ಸಮಾನ. ತಾವೆಲ್ಲರೂ ಅಲಂಕಾರ ಮಾಡಿಕೊಂಡಿರುವಿರಾ? ಅಲಂಕಾರದಲ್ಲಿ ಯಾವುದಾದರೂ ಕೊರತೆ ಇದೆಯೇ? ಹೋಳಿಯ ಶೃಂಗಾರದಲ್ಲಿ ಮುಖ್ಯವಾದದ್ದು ಯಾವುದು? (ಬಹುರೂಪಿ) ಸೋಗು ಹಾಕಿದಾಗ ಅದರ ಮುಖ್ಯ ಶೃಂಗಾರ ಮಸ್ತಕದಲ್ಲಿ ಬಲ್ಬ್ ಹಾಕುತ್ತಾರೆ. ಇದೂ ಸಹ ಈ ಸಮಯದ ಅನುಕರಣೆಯಾಗಿದೆ. ಏಕೆಂದರೆ ನಿಮ್ಮ ಈ ಸಂಗಮಯುಗದ ಮುಖ್ಯ ಅಲಂಕಾರವಾದ ಆತ್ಮದ ದೀಪವನ್ನು ಬೆಳಗಿಸುವುದರ ಗುರುತಾಗಿ ಬಲ್ಬನ್ನು ಇಡುತ್ತಾರೆ. ಆದರೆ, ಇವೆಲ್ಲವೂ ಇರಲು ಹೋಳಿಯ ಅರ್ಥ ನೆನಪಿರಬೇಕು. 'ಹೋಳಿ' ಎಂದರೆ ನಡೆದದ್ದೇನೋ ನಡೆದು ಹೋಯಿತು. ದೃಶ್ಯವೂ ಗತಿಸಿ ಹೋಯಿತು. ಹೋಳಿ ಎಂದರೆ ವರ್ತಮಾನ ಸಮಯ ನಾಟಕದ ಗುರಾಣಿ(ಕವಚ)ಯಾದ ಈ ಮಾತನ್ನು ನೆನಪಿಟ್ಟುಕೊಳ್ಳಬೇಕು. ಯಾವಾಗ ಈ ರೀತಿ ಶಕ್ತಿಶಾಲಿಯಾಗುವಿರೋ ಆಗ ಬಣ್ಣವು ಪಕ್ಕಾ ಹತ್ತುವುದು. ಒಂದು ವೇಳೆ 'ಹೋಳಿ'ಯ ಅರ್ಥವನ್ನು ಜೀವನದಲ್ಲಿ ಅಳವಡಿಸಿಕೊಳ್ಳದಿದ್ದರೆ ಬಣ್ಣವು ಕಚ್ಚಾ ಆಗುವುದು. ಪಕ್ಕಾ ಬಣ್ಣಕ್ಕಾಗಿ ಪ್ರತಿ ಸಮಯ ಯೋಚಿಸಿ ಆಗಿ ಹೋಯಿತು, ಅದದ್ದು ಆಗಿ ಹೋಯಿತು. ಈ ರೀತಿ ಹೋಳಿ ಆಚರಣೆ ಮಾಡುತ್ತಿರುವಿರಾ? ಅಥವಾ ಡ್ರಾಮದ ಕೆಲವು ದೃಶ್ಯಗಳನ್ನು ನೋಡಿ ಮಂಥನ ನಡೆಯುತ್ತಿದೆಯೇ? ಜ್ಞಾನದ ಮಂಥನ ಬೇರೆ ಮಾತಾಗಿದೆ. ಆದರೆ ನಾಟಕದ ದೃಶ್ಯದ ಬಗ್ಗೆ ಏನು, ಏಕೆ, ಹೇಗೆ.... ಇದು ಯಾವುದರ ಮಂಥನವಾಗಿದೆ? ಮೊಸರನ್ನು ಮಥಿಸಿದಾಗ ಬೆಣ್ಣೆ ಬರುತ್ತದೆ ಆದರೆ ನೀರನ್ನು ಮಥಿಸಿದಾಗ ಏನು ಸಿಗುತ್ತದೆ? ಏನೂ ಇಲ್ಲ. ಫಲಿತಾಂಶದಲ್ಲಿ ಒಂದು ದಣಿವು ಎರಡನೆಯದು ಸಮಯದ ವ್ಯರ್ಥತೆ ಬರುತ್ತದೆ. ಆದ್ದರಿಂದ ಇದಾಗಿದೆ ನೀರಿನ ಮಂಥನ. ಈ ರೀತಿ ಮಂಥನ ಮಾಡುವುದರ ಬದಲಾಗಿ ಜ್ಞಾನದ ಮಂಥನ ಮಾಡಿ.

ಸಾಕಾರ ರೂಪದಲ್ಲಿ ಕೊನೆಯ ದಿನಗಳಲ್ಲಿ ಸೇವೆಯ ಮುಖ್ಯ ಯುಕ್ತಿ ಯಾವುದೆಂದು ಹೇಳಿದ್ದರು? "ಮುತ್ತಿಗೆ ಹಾಕುವುದು" ಡಬಲ್ ಮುತ್ತಿಗೆ ಹಾಕುವುದು. ಒಂದಂತೂ ವಾಣಿಯ ಮುಖಾಂತರ ಸೇವೆ, ಮತ್ತೊಂದು ಅವ್ಯಕ್ತ ಆಕರ್ಷಣೆ. ಅದು ಯಾವ ರೀತಿ ಇರಬೇಕೆಂದರೆ ಅದರಿಂದ ತಾವು ಮತ್ತು ಬೇರೆಯವರೂ ಸಹ ಹೊರಗೆ ಬರದಂತೆ ಮುತ್ತಿಗೆ ಹಾಕಬೇಕು. ಆಕ್ರಮಣದ ಪದ್ಧತಿಯನ್ನು ಇಲ್ಲಿಯವರೆಗೆ ಪ್ರತ್ಯಕ್ಷ ರೂಪದಲ್ಲಿ ತೋರಿಸಿಲ್ಲ, ಸಂಗ್ರಹಾಲಯವನ್ನು ಮಾಡುವುದು ಸಹಜ. ಇದೇನು ಮುತ್ತಿಗೆ ಹಾಕುವುದಲ್ಲ, ಆದರೆ ತಮ್ಮ ಅವ್ಯಕ್ತ ಆಕರ್ಷಣೆಯಿಂದ ಅವರನ್ನು ಗಾಯಗೊಳಿಸುವುದೇ ಮುತ್ತಿಗೆ ಹಾಕುವುದಾಗಿದೆ. ಅದೀಗ ನಡೆಯುತ್ತಿದೆ.

ಸೇವೆಯ ಸಮಯ ಇನ್ನೂ ಜಾಸ್ತಿ ಸಿಗುವುದಿಲ್ಲ. ತಮ್ಮ ಸೇವೆಯಲ್ಲಿ ವಿಘ್ನ ವಾಗುವಂತಹ ಸಮಸ್ಯೆಗಳು ಬರುವ ಸಾಧ್ಯತೆಗಳಿವೆ. ಆದ್ದರಿಂದ ಸಮಯ ಸಿಕ್ಕಾಗ ಸಾಧ್ಯವಿದ್ದಷ್ಟು ಹೆಚ್ಚು ಸೇವೆಯನ್ನು ಮಾಡಿ. ಇಲ್ಲವಾದರೆ ಸೇವೆಯ ಸಮಯವೂ ಕಳೆದು ಹೋಗುವುದು (ಹೋಲಿ ಆಗುವುದು, ಹಿಂದಿಯಲ್ಲಿ "ಹೋಲಿ" ಎಂದರೆ "ಆಗಿಹೋಯಿತು" ಎಂದರ್ಥ). ಅದರಿಂದ ತಮ್ಮನ್ನು ತಾವೇ ಅತಿ ಹೆಚ್ಚು ಸೇವೆಯ ಬಂಧನದಲ್ಲಿ ಬಂಧಿಸಿಕೊಳ್ಳಿರಿ. ಈ ಒಂದು ಬಂಧನದಿಂದಲೇ ಅನೇಕ ಬಂಧನಗಳು ದೂರವಾಗುವವು. ತಮ್ಮನ್ನು ತಾವೇ ಈಶ್ವರೀಯ ಸೇವೆಯಲ್ಲಿ ತೊಡಿಸಿಕೊಳ್ಳಬೇಕು ಬೇರೆಯವರಿಂದ ಹೇಳಿಸಿಕೊಂಡು ಅಲ್ಲ. ಬೇರೆಯವರು ಹೇಳುವುದರಿಂದ ಏನಾಗುತ್ತದೆ? ಅರ್ಧ ಫಲ ಸಿಗುತ್ತದೆ ಏಕೆಂದರೆ ಯಾರು ಹೇಳಿದ್ದರೋ ಅಥವಾ ಪ್ರೇರಣೆ ನೀಡಿದ್ದರೋ ಅವರು ಭಾಗಿದಾರರಾಗುವರು. ಅಂಗಡಿಯಲ್ಲಿ ಇಬ್ಬರು ಭಾಗಿದಾರರಿದ್ದರೆ ಹಂಚಿಕೆಯಾಗುತ್ತದೆಯಲ್ಲವೇ? ಒಬ್ಬರೇ ಇದ್ದರೆ ಮಾಲೀಕನಾಗಿರುತ್ತಾನೆ. ಆದ್ದರಿಂದ ಯಾರಾದರೂ ಹೇಳಿದ ಮೇಲೆ ಸೇವೆ ಮಾಡಿದರೆ ಆ ಕಾರ್ಯದಲ್ಲಿ ಭಾಗ ಇರುತ್ತದೆ ಮತ್ತು ಸ್ವಯಂ ಮಾಲಿಕರಾಗಿ ಮಾಡಿದರೆ ಪೂರ್ಣ ಆಸ್ತಿಗೆ  ಅಧಿಕಾರಿಗಳಾಗುತ್ತೀರಿ. ಅದರಿಂದ ಪ್ರತಿಯೊಬ್ಬರೂ ಮಾಲೀಕರಾಗಿ ಮಾಡಿ. ಆದರೆ ಮಾಲೀಕರಾಗುವುದರ ಜೊತೆಗೆ ಬಾಲಕರೂ ಪೂರ್ಣ ಆಗಿ. ಕೆಲವೆಡೆ ಮಾಲೀಕರಾಗುತ್ತಿದ್ದೀರಿ ಮತ್ತು ಕೆಲವು ಬಾರಿ ಬಾಲಕರಾಗಿ ಬಿಟ್ಟು ಬಿಡುತ್ತಿದ್ದೀರಿ. ಅದರಿಂದ ಬಿಡಲೂಬಾರದು, ಗಟ್ಟಿಯಾಗಿ ಹಿಡಿಯಲೂಬಾರದು, ಹಠದಿಂದ ಹಿಡಿಯುವುದಲ್ಲ. ಒಂದು ವೇಳೆ ಯಾವುದೇ ವಸ್ತುವನ್ನು ಬಹಳ ಗಟ್ಟಿಯಾಗಿ ಹಿಡಿದುಕೊಂಡರೆ ಅದರ ರೂಪ ಬದಲಾಗುತ್ತದೆ. ಹೂವನ್ನು ಜೋರಾಗಿ ಹಿಡಿದುಕೊಂಡರೆ ಏನಾಗುತ್ತದೆ? ಹಿಡಿಯಬೇಕು ಆದರೆ ಎಷ್ಟು, ಹೇಗೆ ಎಂಬುದನ್ನು ತಿಳಿದುಕೊಳ್ಳಬೇಕು. ಹಿಡಿದುಕೊಂಡರೆ ಅಂಟಿಕೊಳ್ಳುತ್ತೀರಿ ಅಥವಾ ಬಿಟ್ಟರೆ ದೂರ ಹೋಗುತ್ತೀರಿ. ಎರಡರಲ್ಲೂ ಸಮಾನತೆ ಇರಬೇಕಾದ ಪುರುಷಾರ್ಥವನ್ನು ಮಾಡಬೇಕು. ಯಾರು ಮಾಲಿಕ ಮತ್ತು ಬಾಲಕ ಎರಡೂ ರೀತಿಯಿಂದ ನಡೆಯುವವರಾಗಿದ್ದಾರೆಯೋ ಅವರ ಮುಖ್ಯ ಗುರುತಾಗಿದೆ--ಒಂದು ನಿರ್ಮಾಣತೆಯ ಜೊತೆಗೆ ನಿರಹಂಕಾರಿ, ನಿರ್ಮಾನತೆಯ ಜೊತೆಗೆ ಪ್ರೇಮ ಸ್ವರೂಪ. ಈ ನಾಲ್ಕು ಮಾತುಗಳು ಅವರ ಪ್ರತಿಯೊಂದು ನಡವಳಿಕೆಯಲ್ಲಿ ಕಂಡು ಬರುತ್ತವೆ. ಒಂದು ವೇಳೆ ಈ ನಾಲ್ಕರಲ್ಲಿ ಒಂದು ಕಡಿಮೆ ಇದ್ದರೂ ಸ್ವಲ್ಪ ಸ್ಥಿತಿಯಲ್ಲಿ ಕೊರತೆಯಿರುವುದು. ಒಳ್ಳೆಯದು.

ವತನದಲ್ಲಿ ಇಂದು ಹೋಳಿ ಹೇಗೆ ಆಡಿದ್ದಾರೆ ಎಂದು ನಿಮಗೆ ಗೊತ್ತೇ? ಕೇವಲ ಮಕ್ಕಳೊಂದಿಗೆ. ನೀವು ಕೂಡ ಹೋಳಿ ಆಚರಿಸಿಕೊಳ್ಳುತ್ತಿರುವಿರಿ ತಾನೆ?  ಅಲ್ಲಿ ಸಂದೇಶಿ ಬಂದಾಗ ಒಂದು ಆಟವನ್ನು ಆಡಿದರು. ಯಾವ ಆಟ ವಾಗಿರಬಹುದು? (ತಾವು ಕರೆದುಕೊಂಡು ಹೋದರೆ ನೋಡುತ್ತೇವೆ) ಬುದ್ಧಿಯ ವಿಮಾನವಿದೆಯಲ್ಲ. ಇದಂತೂ ದಿವ್ಯ ದೃಷ್ಟಿಗಿಂತಲೂ ಚೆನ್ನಾಗಿದೆ. ಇಲ್ಲಂತೂ ಅದು ಇರಲಿಕ್ಕೆ ಸಾಧ್ಯವೇ ಇಲ್ಲ. ಅಂತಹ ವಸ್ತುಗಳೆ ಇಲ್ಲ. ಇಂದು ಹರ್ಷೋಲ್ಲಾಸದ ದಿನವಲ್ಲವೇ? ಸಂದೇಶಿಯರು ವತನಕ್ಕೆ ಬಂದಾಗ ಬಹಳ ಸುಂದರವಾದ ಹೂಗಳ ಬೆಟ್ಟವನ್ನು ಮಾಡಿ ಸಾಕಾರರನ್ನು ಬಚ್ಚಿಡಲಾಗಿತ್ತು. ದೂರದಿಂದ ಬೆಟ್ಟವೇ ಕಾಣುತ್ತಿತ್ತು. ಸಂದೇಶಿ ವತನಕ್ಕೆ ಬಂದಾಗ ಬಹಳ ಹುಡುಕಿದರೂ ಸಾಕಾರನು ಕಾಣಲಿಲ್ಲ. ನಂತರ ಬಚ್ಚಿಟ್ಟು ಕೊಳ್ಳುವ ಆಟದಂತೆ ಹೂಗಳ ಮಧ್ಯ ಸಾಕಾರನು ಕುಳಿತದ್ದು ಕಂಡು ಬಂತು. ಆ ದೃಶ್ಯ ಬಹಳ ಸುಂದರವಾಗಿತ್ತು. ಅವ್ಯಕ್ತ ಬಾಪದಾದರವರು ಪ್ರತಿಯೊಬ್ಬರಿಗೂ ಅಮೃತವನ್ನು ಕುಡಿಸಿ ಭೋಗವನ್ನು ಕೊಡುತ್ತಿದ್ದರು ಮತ್ತು ಒಬ್ಬೊಬ್ಬರ ಜೊತೆಗೆ ಮಿಲನವನ್ನೂ ಮಾಡುತ್ತಿದ್ದರು. ಯಾರು ಒಳಗೆ ಬಂದರೂ ನೋಡಿ ಒಮ್ಮೆಯೇ ಆಕರ್ಷಿತರಾಗುವಂತೆ ಸಂಗ್ರಹಾಲಯವನ್ನು ಅವ್ಯಕ್ತ ಆಕರ್ಷಣೆಯಿಂದ ಮಾಡಿ, ಎಂದು ಸಂಗ್ರಹಾಲಯದವರಿಗೆ ವಿಶೇಷವಾಗಿ ಸೂಚನೆಗಳನ್ನು ಕೊಡುತ್ತಿದ್ದರು. ಒಳ್ಳೆಯದು.

**ಅವ್ಯಕ್ತ ಮುರಳಿ 04-03-1969 .**

***ಹೋಳಿಯ ಶುಭಸಮಯದಲ್ಲಿ***

"ಹೋಳಿ" ಎಂದರೆ ಯಾವುದಾದರೂ ನಡೆದು ಹೋದ ವಿಷಯವನ್ನು ಪೂರ್ತಿಯಾಗಿ ಸಮಾಪ್ತಿ ಮಾಡಬೇಕು. ನಡೆದದ್ದೇನೋ ನಡೆದು ಹೋಯಿತು ಎಂದು ಭಾವಿಸಿ, ಮುನ್ನಡೆಯುವುದೇ ಹೋಳಿಯನ್ನು ಆಚರಿಸುವುದಾಗಿದೆ. ಅರ್ಥಾತ್ ಹೋಳಿಯ ಅರ್ಥವನ್ನು ನಿಜ

ಜೀವನದಲ್ಲಿ ಧಾರಣೆ ಮಾಡಬೇಕು, ಎನ್ನುತ್ತಾ..... ಶಿವಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಯೊಗಸ್ಥಿತಿ ಅಥವಾ ಆತ್ಮಿಕಸ್ಥಿತಿ**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ

1. ನಾನು ಹೇಗೆ, ಏಕೆ, ಏನು ಎಂಬ ಪ್ರಶ್ನೆಗಳನ್ನು ಸಮಾಪ್ತಿ ಮಾಡಿ, ಆತ್ಮಕ್ಕೆ ಜ್ಞಾನ ಭೋಜನವನ್ನು ಕೊಡುತ್ತಿದ್ದೇನೆ.

2. ನಾನು ನನ್ನ ಅವ್ಯಕ್ತ ಆಕರ್ಷಣೆಯಿಂದ ಎಲ್ಲರೂ ಬಲಿಹಾರವಾಗುವ ಹಾಗೆ ಆಕ್ರಮಣ (ಮುತ್ತಿಗೆ) ಮಾಡುತ್ತಿದ್ದೇನೆ.

3. ನಾನು ಸಾಧ್ಯವಾದಷ್ಟು ಹೆಚ್ಚಾಗಿ ಈಶ್ವರೀಯ ಸೇವೆಯಲ್ಲಿ ಬಂಧಿಸಿಕೊಂಡಿರುವ ಕಾರಣಕ್ಕಾಗಿ ನನ್ನ ಅನೇಕ ಬಂಧನಗಳು ತೊಲಗಿ ಹೋಗಿವೆ.

4.ನಾನು ಈಶ್ವರೀಯ ಸೇವೆಯಲ್ಲಿ ನನ್ನನ್ನು ನಾನು ತೊಡಗಿಸಿಕೊಂಡು ಪೂರ್ಣ ಸಂಪಾದನೆಗೆ ಅಧಿಕಾರಿಯಾಗಿದ್ದೇನೆ.

5. ನಾನು ನಿರ್ಮಾಣತೆಯೊಂದಿಗೆ ನಿರಹಂಕಾರಿ ಮತ್ತು ನಿರ್ಮಾನತೆಯೊಂದಿಗೆ ಪ್ರೇಮ ಸ್ವರೂಪವಾಗಿ ಸಮಯಾನುಸಾರ ಮಾಲೀಕ ಮತ್ತು ಬಾಲಕ ಸ್ಥಿತಿಯಲ್ಲಿ ಇದ್ದೇನೆ.

**ಹೆಚ್ಚಿನ ಮಾಹಿತಿಗಾಗಿ.**

1.ಮನನ-ಚಿಂತನೆ(ಮನನ ಶಕ್ತಿ) : ಅವ್ಯಕ್ತ ಮುರಳಿ

(01-02-1979 - ಮನನಶಕ್ತಿಯೇ ಮಾಯಾಜಿತ್ ರಾಗುವ ಸಾಧನ.

23-12-1987 - ಮನನ ಶಕ್ತಿ ಮತ್ತು ಮಗ್ನಸ್ಥಿತಿ.

10-01-1988 - ಮನನ ಮಾಡುವ ವಿಧಿ ಮತ್ತು ಮನನ ಶಕ್ತಿಯನ್ನು ಬೆಳೆಸಿಕೊಳ್ಳುವ ಯುಕ್ತಿಗಳು.

01-04-1981 - ಮನನ ಶಕ್ತಿಯ ಮೂಲಕ ಸರ್ವಶಕ್ತಿಗಳ ಸ್ವರೂಪದ ಅನುಭೂತಿ).